ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯ

124 (817) ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) – ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ನಡೆಯುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳ ಒಟ್ಟು ಸಂಖ್ಯೆ ಎಷ್ಟು ಮತ್ತು ಇವುಗಳು ಯಾವ ಯಾವ ಊರಿನಲ್ಲಿರುತವೆ ,

(ಆ) ಈ ತಾಲ್ಲೂಕಿನಲ್ಲಿ ಇನ್ನೂ ಎಷ್ಟು ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳ ಅವಶ್ಯಕತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

(ಅ) ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆಗಳಿಗೆ ಸಂಬಂಧಿಸಿದಂತೆ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಯಾವುದೇ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳಿರುವುದಿಲ್ಲ

(ಆ) ತಾಲ್ಲೂಕಿನ ಶ್ರೀನಿವಾಸಪುರ ಟೌನ್‌ಗೆ ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಹಾಗೂ ಒಂದು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದ ಅವಶ್ಯಕತೆ ಇರುವುದು ಗಮನಕ್ಕೆ ಬಂದಿರುತ್ತದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಈ ವರ್ಷದಲ್ಲಿ ಶ್ರೀನಿವಾಸಪುರ ಟೌನ್‌ನಲ್ಲಿ ಪ್ರಾರಂಭ ಮಾಡುತ್ತೀರಾ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ ಮತ್ತೆ ಇದರ ಜೊತೆಗೆ ಇನ್ನೂ ಎರಡು ಊರುಗಳಲ್ಲಿ ಪ್ರಾರಂಭ ಮಾಡತಕ್ಕಂಥ ಅವಶ್ಯಕತೆ ಇದೆ ಇದರ ಬಗ್ಗೆ ನಿಮ್ಮ ಅಧಿಕಾರಿಗಳು ಸರಿಯಾಗಿ ಮಾಹಿತಿ ಕೊಟ್ಟಿಲ್ಲವೆಂದು ಭಾವಿಸಿಕೊಳ್ಳುತ್ತೇನೆ ಯಳಂದೂರು ಮತ್ತು ಗೌನಿಪಲ್ಲಿ ಊರುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದಾರೆ ಆದ್ದರಿಂದ, ಇಲ್ಲಿಯೂ ಕೂಡ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ ಮಾನ್ಯ ಸಭಾಧ್ಯಕ್ಷರೆ, ಶ್ರೀನಿವಾಸಪುರ ಟೌನ್‌ನಲ್ಲಿ ಈ ವರ್ಷದಿಂದ ಹಾಸ್ಟೆಲ್‌ನ್ನು ಪ್ರಾರಂಭ ಮಾಡಲಾಗುತ್ತದೆಯೇ ಎಂದು ಹಿರಿಯ ಸದಸ್ಯರಾದ ಮಾನ್ಯ ರಮೇಶ್ ಕುಮಾರ್‌ರವರು ಕೇಳಿದ್ದಾರೆ ಈಗಾಗಲೇ ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ 100 ಹಾಸ್ಟೆಲ್‌ಗಳನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ ಇದರ ಜೊತೆಗೆ ಸೇವಿಂಗ್ಸ್ ಮಾಡಿ ಮತ್ತೆ

25 ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತಿದ್ದೇವೆ ಇದರಲ್ಲಿ ಮೊದಲನೇ ಆದ್ಯತೆಯನ್ನು ಶ್ರೀನಿವಾಸಪುರ ಟೌನ್‌ಗೆ ಕೊಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ – ಯಳಂದೂರು ಮತ್ತು ಗೌನಿಪಲ್ಲಿ ಊರುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದಾರೆ ಆದ್ದರಿಂದ ಇಲ್ಲಿಯೂ ಕೂಡ ಹಾಸ್ಟೆಲ್‌ಗಳ ವ್ಯವಸ್ಥೆ ಮಾಡಿಕೊಡುತ್ತೀರಾ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ – ಮತ್ತೆ 25 ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುವಾಗ ಅಲ್ಲಿಗೊಂದು ಬಿಸಿಎಂಸಿ ಹಾಸ್ಟೆಲ್‌ನ್ನು ಮಾಡಿಕೊಡುತ್ತೇವೆ ತಾವು ಹೇಳಿದ 2 ಊರುಗಳಲ್ಲಿ ಒಂದೇ ಸಾರಿ ಮಾಡಿಕೊಡುವುದಕ್ಕೆ ಕಷ್ಟವಾಗುತ್ತದೆ

ಶ್ರೀ ಕೆ ಆರ್ ರಮೇಶ್ ಕುಮಾರ್ – ಇಲ್ಲಿಯವರೆಗೂ ಹಾಸ್ಟೆಲ್‌ಗಳನ್ನು ವೈಜ್ಞಾನಿಕ ರೀತಿಯಲ್ಲಿ ಮಾಡಿಲ್ಲ ಮನಸೋ ಇಚ್ಛೆ ಅಥವಾ ಯಾರಿಂದಾದರೂ ಪ್ರಬಲ ಇರುವ ಕಡೆ ಮಾಡುವುದಕ್ಕಿಂಥ ಅಗತ್ಯ ಇರುವ ಕಡೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ ಯಾವ ಮಕ್ಕಳು ವಿದ್ಯಾಭ್ಯಾಸ ಮಾಡಬೇಕೆಂದು ಇರುತ್ತಾರೆಯೋ ಅವರಿಗೆ ಹಾಸ್ಟೆಲ್ ವ್ಯವಸ್ಥೆ ಇಲ್ಲದಿದ್ದರೆ ಓದುವುದನ್ನು ನಿಲ್ಲಿಸಿಬಿಡುತ್ತಾರೆ ಆದ್ದರಿಂದ ಇಂಥ ಮಕ್ಕಳಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಹಾಸ್ಟೆಲ್‌ನ್ನು ಪ್ರಾರಂಭ ಮಾಡಲಾಯಿತು ಆದರೆ, ಇಲ್ಲಿ ಏನಾಗಿದೆ ಎಂದರೆ ಜಂಗಿ ಕುಸ್ತಿಯಲ್ಲಿ ಯಾರು ಪ್ರಬಲ ಇರುತ್ತಾರೋ ಅವರು 10, 20 ಹಾಸ್ಟೆಲ್ ಎಂದು ಬರೆದುಕೊಳ್ಳುತ್ತಾ ಹೋಗುತ್ತಾರೆ ಆ ರೀತಿಯಾಗಿ ಮಾಡುವುದಕ್ಕೆ ತಾವು ಹೋಗಬೇಡಿ ಇದೆಲ್ಲಾ ಅವಿವೇಕ ನಾನು ತಮಗೆ ಹೇಳುವುದೇನೆಂದರೆ, ನಿಮ್ಮ ಅಧಿಕಾರಿಗಳ ಒಂದು ತಂಡವನ್ನು ಅಲ್ಲಿಗೆ ಕಳುಹಿಸಿ ಮಾಹಿತಿಯನ್ನು ತರಿಸಿಕೊಳ್ಳಿ ಅಗತ್ಯ ಇರುವ ಕಡೆ ಹಾಸ್ಟೆಲ್‌ಗಳನ್ನು ನೀವು ಪ್ರಾರಂಭ ಮಾಡದಿದ್ದರೆ ನಿಮ್ಮ ಇಲಾಖೆ ಮತ್ತು ನೀವು ಇದ್ದರೇನು, ಇಲ್ಲದಿದ್ದರೇನು? ಶ್ರೀನಿವಾಸಪುರ ಟೌನ್‌ನಲ್ಲಿ ಮತ್ತು ಯಳಂದೂರು ಹಾಗೂ ಗೌನಿಪಲ್ಲಿ ಊರಿನಲ್ಲಿ ಈ ವರ್ಗಕ್ಕೆ ಸೇರಿದಂಥ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಹೆಣ್ಣುಮಕ್ಕಳ ವಿದ್ಯಾಬ್ಯಾಸಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವುದು ನಿಮ್ಮ ನಮ್ಮೆಲ್ಲರ ಕರ್ತವ್ಯವಾಗಿದೆ ಆದ್ದರಿಂದ, ಹಣಕಾಸಿನ ವ್ಯವಸ್ಥೆ ಬಗ್ಗೆ ನೀವು ಏನು ಬೇಕಾದರೂ ಮಾಡಿಕೊಳ್ಳಿ, ಅದು ನನಗೆ ಗೊತ್ತಿಲ್ಲ ಏಕಂದರೆ, ಇದು ಸರ್ಕಾರದ ಜವಾಬ್ದಾರಿ ಅಲ್ಲಿ ಪ್ರಾರಂಭ ಮಾಡುತ್ತೇವೆಂದು ಈಗ ತಾವು ವಾಗ್ದಾನ ಕೊಡಬೇಕು ಈ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭ ಮಾಡುತ್ತೇನೆಂದು ಹೇಳಿದರೆ ಆಗ ನಿಮ್ಮ ಮಂತ್ರಿ ಸ್ಥಾನಕ್ಕೆ ಧೈರ್ಯ ಮತ್ತೆ ಮೆರುಗು ಬರುತ್ತದೆ

ಶ್ರೀ ಬಾಲಚಂದ್ರ ಲ ಜಾರಕಿಹೊಳಿ – ಸನ್ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ರಮೇಶ್‌ಕುಮಾರ್‌ರವರು ಕೊಟ್ಟಿರುವ ಸಲಹೆ ಪ್ರಕಾರ

ಅಧಿಕಾರಿ ವರ್ಗದವರನ್ನು ಅಲ್ಲಿಗೆ ಕಳುಹಿಸಿ ಅಲ್ಲಿನ ವರದಿಯನ್ನು ಶೀಘ್ರವಾಗಿ ತರಿಸಿಕೊಂಡು ಅಲ್ಲಿ ಹಾಸ್ಟೆಲ್‌ನ ಅವಶ್ಯಕತೆ ಇದ್ದರೆ ಈ ಶೈಕ್ಷಣಿಕ ವರ್ಷದಲ್ಲಿಯೇ ಖಂಡಿತ ಪ್ರಾರಂಭ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಡಿ ಕೆ ಶಿವಕುಮಾರ್ ಈ ವರ್ಷದಲ್ಲಿಯೇ ಮಾಡುತ್ತೇವೆಂದು ಹೇಳಿ ಅದನ್ನು ಹೇಳುವುದಕ್ಕೆ ತಾವು ಏತಕ್ಕೆ ಹೆದರಿಕೊಳ್ಳುತ್ತೀರಾ?

ಉಪಾಧ್ಯಕ್ಷರು ಮುಂದಿನ ಪ್ರಶ್ನೆ ಮಾನ್ಯ ಎಸ್ ಎಂ ಮುನಿಯಪ್ಪನವರದು, ಅವರು ಇಲ್ಲ ಮಾನ್ಯ ಬಿ ಆರ್ ಪಾಟೀಲ್‌ರವರ ಪ್ರಶ್ನೆ, ಅವರು ಇಲ್ಲ ಶ್ರೀಮತಿ ಟಿ ಭಾಗೀರಥಿರವರ ಪ್ರಶ್ನೆ, ಅವರು ಇಲ್ಲ ಮಾನ್ಯ ಮಿರಾಜುದ್ದೀನ್ ಪಟೇಲ್‌ರವರ ಪ್ರಶ್ನೆ, ಅವರೂ ಕೂಡ ಇಲ್ಲ ಮುಂದಿನ ಪ್ರಶ್ನೆ ವಿ ಸುನೀಲ್ ಕುಮಾರ್‌ರವರದು

ಪರಿಶಿಷ್ಟ ಜಾತಿ ಹಾಗೂ ಪಂಗಡ ವಿದ್ಯಾರ್ಥಿಗಳ ಶುಲ್ಕ ಸಬ್ಸಿಡಿ

129 (925) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) 2006–07ನೇ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪಂಗಡ ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಶುಲ್ಕ ಸಬ್ಸಿಡಿ ನೀಡಲು ಬಾಕಿ ಇರುವ ಹಣ ಎಷ್ಟು,

(ಆ) ಯಾವ ಯಾವ ಕಾಲೇಜುಗಳಿಗೆ ಎಷ್ಟೆಷ್ಟು ನೀಡಲು, ಬಾಕಿ ಇದೆ, (ವಿವರ ನೀಡುವುದು)

(ಇ) ಈ ಹಣ ನೀಡದೇ ಇರುವುದರಿಂದ ವಿದ್ಯಾರ್ಥಿಗಳು ಅತಂತ್ರ ಸ್ಥಿತಿಗೆ ತಲುಪಿ ಶಿಕ್ಷಣವನ್ನು ತೆರೆಯುವ ಸ್ಥಿತಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

(ಈ) ಹಾಗಿದ್ದಲ್ಲಿ, ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

(ಅ) ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ವೃತ್ತಿ ಶಿಕ್ಷಣ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ಸಬ್ಸಿಡಿ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದಿಲ್ಲ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ 1 00 ಲಕ್ಷದ ಮಿತಿಯೊಳಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಆಯಾ ಸಾಲಿಗೆ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಸರ್ಕಾರಿ ಸೀಟಿಗೆ